ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ : 10.07.1996 ರಲ್ಲಿ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುನಿರಾಜು) 28/12/15
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್
ಮತ್ತು ವಕ್ಫ್ ಇಲಾಖೆ.

ಗೆ:

1) ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು
2) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಆಪ್ತ ಕಾರ್ಯದರ್ಶಿ,
3) ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರಿಗೆ,
4) ಎಲ್ಲಾ ಜಿಲ್ಲಾಧಿಕಾರಿಗಳು,
5) ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಬೆಂಗಳೂರು.
7) ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.
8) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
9) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
10) ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ ಇಲಾಖೆ.
11) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-3, ವಿಧಾನ ಸೌಧ, ಬೆಂಗಳುರು.
12) ಸರ್ಕಾರದ ಜಂಟಿ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
13) ಶಾಖಾ/ರಕ್ಷ ಕಡತ/ಹೆಚ್ಚುವರಿ ಪ್ರತಿ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರಮ ಶಕ್ತಿ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತರ ಕುಶಲಕರ್ಮಿಗಳು/ವೃತ್ತಿ ಕುಲಕಸಬುದಾರರಿಗೆ ಹಾಗೂ ಸಣ್ಣಪುಟ್ಟ ವೃತ್ತಿಯನ್ನು ಅವಲಂಬಿಸಿರುವ ಕಸಬುದಾರರಿಗೆ ನಿಗಮದಿಂದ ಕಲ್ಪಿಸುತ್ತಿರುವ ಘಟಕ ವೆಚ್ಚದ ಸಾಲ ಸೌಲಭ್ಯವನ್ನು ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರಿ ಆದೇಶ ಸಂಖ್ಯೆ: ಸಕಇ 245 ಜಿಎಂಎಸ್ 2004, ದಿನಾಂಕ: 27-04-2005 ಹಾಗೂ 12.10.2006.
2) ವ್ಯವಸ್ಥಾಪಕ ನಿರ್ದೇಶಕರು, ಕೆಎಂಡಿಸಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಅಅನಿ/ಶ್ರಮಶಕ್ತಿ/2014-15/3399, ದಿನಾಂಕ: 22.09.2014

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ: 27.04.2005 ಹಾಗೂ 12.10.2006 ರ ಆದೇಶದಲ್ಲಿ ಅಲ್ಪಸಂಖ್ಯಾತರನ್ನು ಶ್ರಮಶಕ್ತಿ ಯೋಜನೆಯಲ್ಲಿ ಒಳಗೊಂಡಂತೆ ಕುಶಲ ಕರ್ಮಿಗಳು/ವೃತ್ತಿ ಕುಶಲಕರ್ಮಿದಾರರಿಗೆ ಸಾಲ ಸೌಲಭ್ಯವನ್ನು ಕಲ್ಪಸಲು ಆದೇಶಿಸಿರುತ್ತಾರೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಮತೀಯ ಅಲ್ಪಸಂಖ್ಯಾತರಿಗೆ "ಶ್ರಮಶಕ್ತಿ" ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿಯಲ್ಲಿ ಕುಶಲಕರ್ಮಿಗಳು/ವೃತ್ತಿ ಕಸುಬುದಾರರು ಹಾಗೂ ಎಲ್ಲಾ ಸಣ್ಣ ಪುಟ್ಟ ವೃತ್ತಿಯನ್ನು ಅವಲಂಬಿಸಿರುವ ಅಲ್ಪಸಂಖ್ಯಾತರಿಗೆ ಘಟಕದ ಗರಿಷ್ಠ ವೆಚ್ಚ ರೂ. 25,000/- ಗಳವರೆಗೆ ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ. ಮತೀಯ ಅಲ್ಪಸಂಕ್ಯಾತರು ಕೈಗೊಳ್ಳುವ ಆಯಾ ವೃತ್ತಿಯ ಘಟಕ ವೆಚ್ಚಕ್ಕೆ ಅಗತ್ಯವಿರುವ ಪೂರ್ಣ ಹಣವನ್ನು ಮೊದಲಿಗೆ ಸಾಲವನ್ನಾಗಿ ನೀಡಲಾಗುತ್ತಿದೆ. ಫಲಾನುಭವಿಗಳು ಸಾಲವನ್ನು ನಿಗಮದಿಂದ ನಿಗದಿಪಡಿಸಿರುವ ಕಂತುಗಳಲ್ಲಿ ಸಕಾಲದಲ್ಲಿ ಮರುಪಾವತಿ ಮಾಡುತ್ತಿದ್ದಲ್ಲಿ, ಆಯಾ ಘಟಕ ವೆಚ್ಚಕ್ಕೆ ಅನುಗುಣವಾಗಿ ಶೇ. 25 ರಷ್ಟು ಸಾಲವನ್ನು ಸರ್ಕಾರಿ ಆದೇಶದನ್ವಯ ಸಹಾಯ ಧನ (ಬ್ಯಾಂಕ್ ಎಂಡ್ ಸಬ್ಸಿಡಿ) ಎಂದು ಪರಿಗಣಿಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ.

ಪ್ರಸ್ತುತ, ನಿಗಮದಿಂದ ಕಲ್ಪಿಸಲಾಗುತ್ತಿರುವ ಸಾಲದ ಮೊತ್ತವು ಅತಿ ಕಡಿಮೆಯಾಗಿದ್ದು, (ಗರಿಷ್ಠ ರೂ. 25,000) ಈ ಮೊತ್ತದಲ್ಲಿ ಫಲಾನುಭವಿಯು ಉದ್ದೇಶಿತ ವೃತ್ತಿ ಕೈಗೊಳ್ಳಬೇಕಾದ ಕಚ್ಚಾ ಸಾಮಗ್ರಿಗಳ ಬೆಲೆಯು ಅಧಿಕವಾಗಿರುವುದರಿಂದ ಹಾಗೂ ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಫಲಾನುಭವಿಯು ಭರಿಸಬೇಕಾದ ಸಾಗಾಣಿಕೆ (Transportation) ವೆಚ್ಚವು ಅಧಿಕವಾಗಿರುವುದರಿಂದ ಉದ್ದೇಶಿತ ಘಟಕವು ಪೂರ್ಣ ಪ್ರಮಾಣದಲ್ಲಿ ಅನುಷ್ಠನಗೊಳ್ಳದೇ ಇರುವ ಹಿನ್ನಲೆಯಲ್ಲಿ ಘಟಕ ವೆಚ್ಚವನ್ನು ಗರಿಷ್ಠ ರೂ. 50,000/- ಗಳಿಗೆ ಹೆಚ್ಚಿಸಿದರೇ ಅಲ್ಪಸಂಖ್ಯಾತರ ಸಮುದಾಯದ ಕಡು ಬಡವರು ಕೈಗೊಳ್ಳಬಹುದಾದಂತಹ ವೃತ್ತಿ/ಕುಲಕಸಬುಗಳ ಸಣ್ಣಪುಟ್ಟ

..2.

ವೃತ್ತಿಗಳಿಗೆ ಅನುಕೂಲವಾಗುತ್ತದೆ. ಹಾಗೂ ಈ ಶ್ರಮಶಕ್ತಿ ಯೋಜನೆಯಡಿ ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ವೃತ್ತಿ ಕುಲಕಸುಬುದಾರರಿಗೆ ಅವಶ್ಯಕತೆ ಇರುವ ಯಂತ್ರೋಪಕರಣಗಳು/ಸಲಕರಣೆಗಳು ಹಾಗೂ ಕಚ್ಚಾ ಸಾಮಗ್ರಿಗಳನ್ನು ಖರೀದಿಸಲು ಸಾಲ ಸೌಲಭ್ಯ ಕಲ್ಪಿಸಲಾಗುತ್ತದೆ. (Specific Trade Linked Activities-list enclosed) ಎಂದು ತಿಳಿಸಿರುತ್ತಾರೆ.

"ಶ್ರಮಶಕ್ತಿ"ಯೋಜನೆಯ ಘಟಕ ವೆಚ್ಚವನ್ನು ಹೆಚ್ಚಿಸುವ ಬಗ್ಗೆ ಅಲ್ಪಸಂಖ್ಯಾತ ಸಮುದಾಯದ ಕುಲಕಸುಬುದಾರರು, ಜನಪ್ರತಿನಿಧಿಗಳು ಹಾಗೂ ಕೆಲವು ಶಾಸಕರು ಬೇಡಿಕೆಯನ್ನು ಸಲ್ಲಿಸುತ್ತಿರುವ ಹಿನ್ನಲೆಯಲ್ಲಿ "ಶ್ರಮಶಕ್ತಿ" ಯೋಜನೆಯ ಘಟಕ ವೆಚ್ಚವನ್ನು ರೂ. 25,000/- ಗಳಿಂದ ರೂ. 50,000/- ಗಳಿಗೆ ಹೆಚ್ಚಿಸಬೇಕೆಂದು ಹಾಗೂ ಇದರಲ್ಲಿ ಆಯಾ ಘಟಕ ವೆಚ್ಚಕ್ಕೆ ಅನುಗುಣವಾಗಿ ಶೇ.50 ರಷ್ಟು ಸಾಲವನ್ನು ಸಹಾಯಧನ ಎಂದು ಪರಿಗಣಿಸಿ ಸೂಕ್ತ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: MWD 80 MDC 2014, ಬೆಂಗಳೂರು ದಿನಾಂಕ:28.02.2015**

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಶ್ರಮಶಕ್ತಿ ಯೋಜನೆಯಡಿಯಲ್ಲಿ ನೀಡುತ್ತಿರುವ ಘಟಕ ವೆಚ್ಚವನ್ನು ರೂ. 25,000/- ರೂ.ಗಳಿಂದ ರೂ. 50,000/- ಗಳಿಗೆ ಹೆಚ್ಚಿಸಲು ಹಾಗೂ ಶೇ. 50 ರಷ್ಟು ಸಾಲವನ್ನು ಸಹಾಯಧನವಾಗಿ ಪರಿಗಣಿಸಿ ಮಂಜೂರಾತಿ ನೀಡಿ ಆದೇಶಿಸಲಾಗಿದೆ. ಶ್ರಮಶಕ್ತಿ ಯೋಜನೆಯಡಿಯ ಯೋಜನೆ ಉದ್ದೇಶಕ್ಕಾಗಿ ಗುರುತಿಸಲಾದ ಅರ್ಹ ಪರಂಪರಾಗತ ಕುಶಲಕರ್ಮಿಗಳು/ವೃತ್ತಿ ಕುಲಕಸುಬುಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. ಇದಕ್ಕೆ ಹೆಚ್ಚುವರಿಯಾಗಿ ತಗಲುವ ವೆಚ್ಚವನ್ನು 2014-15 ನೇ ಸಾಲಿನಲ್ಲಿ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಭರಿಸತಕ್ಕದ್ದು.

ಈ ಆದೇಶವನ್ನು ಟಿಪ್ಪಣಿ ಸಂಖ್ಯೆ: ಸಕಕಾ 284 ಆಂಆಸ 2014, ದಿನಾಂಕ: 30.10.2014 ರಲ್ಲಿ ಆಂತರಿಕ ಆರ್ಥಿಕ ಸಲಹೆಗಾರರು ನೀಡಿರುವ ಸಹಮತಿ ಹಾಗೂ ಟಿಪ್ಪಣಿ ಸಂಖ್ಯೆ: ಆಇ 980 ವೆಚ್ಚ-3/2014, ದಿನಾಂಕ: 05.02.2015 ರನ್ವಯ ಆರ್ಥಿಕ ಇಲಾಖೆಯು ನೀಡಿರುವ ಸಹಮತಿ.